

# ಉಡುಪಿನಲ್ಲಿ ಪಿಚ್ವಾಯ್ ಕಲೆ

**ದೇವಾಲಯ ಪರಿಕಲ್ಪನೆಯ ಪಿಚ್ವಾಯ್ ಕಲೆ ಫ್ಯಾಷನ್ ಜಗತ್ತಿನಲ್ಲಿ ಹೊಸ ಟ್ರೆಂಡ್ ಸೃಷ್ಟಿಸುತ್ತಿದೆ. ಸೀರೆ, ಸಲ್ವಾರ್‌ಗಳಲ್ಲಿ ಈ ಕಲೆಯನ್ನು ವಿನ್ಯಾಸ ಮಾಡಿಸಿಕೊಂಡು ಮಹಿಳೆಯರು ಖುಷಿಪಡುತ್ತಿದ್ದಾರೆ. ಜೊತೆಗೆ ಪಿಚ್ಚಾಯ್ ಕಲೆಯಿರುವ ಆ್ಯಕ್ಸೆಸರೀಸ್ ಕೂಡ ಲಭ್ಯ.**

■ ಆಶಾ ಎಸ್. ಕುಲಕರ್ಣಿ

ಹಳೆಯ ಫ್ಯಾಷನ್ ಮತ್ತೆ ಮತ್ತೆ ಹೊಸ ಹೊಸ ರೂಪ ಪಡೆದು ಟ್ರೆಂಡ್ ಸೃಷ್ಟಿಸುತ್ತಿದೆ. ಇದೀಗ ರಾಜಸ್ಥಾನದ ಸಾಂಪ್ರದಾಯಿಕ ‘ಪಿಚ್ವಾಯ್ ಕಲೆ’ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಟ್ಟಿದೆ. ನಮ್ಮ ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿನ ಕಲಾಭಿಮಾನಿಗಳ ಮನಸ್ಸನ್ನು ದೋಚಿರುವ ಪ್ರಾಚೀನ ಕಲೆ ಇದು.

ಪಿಚ್ವಾಯ್ ಎಂಬುದು ಸಂಸ್ಕೃತ ಪದ. ಉಡುಪಿನ ಮೇಲೆ ಮಾಡುವಂತಹ ಒಂದು ರೀತಿಯ ಕಲೆ. ಇದು ರಾಜಸ್ಥಾನ ಮೂಲದ ವಿಶಿಷ್ಟ ಕಲೆ. ಇವುಗಳನ್ನು ಮುಖ್ಯವಾಗಿ ಕೃಷ್ಣನ ವಿವಿಧ ರೂಪಗಳನ್ನು ಪೇಂಟಿಂಗ್‌ನಲ್ಲಿ ಸೃಷ್ಟಿಸಿ ದೇಗುಲಗಳಲ್ಲಿ ನೇತುಹಾಕಲು ತಯಾರಿಸಲಾಗುತ್ತಿತ್ತು.

ರಾಜಸ್ಥಾನದ ನಾಥದ್ವಾರದಲ್ಲಿರುವ ಶ್ರೀನಾಥ್‌ಜಿ ದೇವಾಲಯವನ್ನು 1672ರ ಸುಮಾರಿಗೆ ನಿರ್ಮಿಸಲಾಗಿದೆ. ಈ ದೇವಾಲಯದಲ್ಲಿ ಶ್ರೀನಾಥ್‌ಜಿಯ ವಿಗ್ರಹದ ಹಿಂದೆ ಈ ತರಹದ ಪೇಂಟಿಂಗ್‌ಗಳನ್ನು ತೂಗು ಹಾಕಲಾಗಿದೆ. ಇಲ್ಲಿ ಶ್ರೀಕೃಷ್ಣನ ಲೀಲೆಗಳನ್ನು ಸುಂದರವಾಗಿ ಹಾಗೂ ಕಲಾತ್ಮಕವಾಗಿ ಚಿತ್ರಿಸಲಾಗಿದೆ. ಈ ದೇಗುಲದಲ್ಲಿ ಈ ತರಹದ ಪೇಂಟಿಂಗ್‌ಗಳನ್ನು ಹಾಕುವ ಉದ್ದೇಶವೆಂದರೆ, ಅನಕ್ಷರಸ್ಥರಿಗೆ ಈ ಚಿತ್ರಗಳ ಮೂಲಕ ಕೃಷ್ಣನ ಕಥೆಗಳನ್ನು ಹೇಳುವುದಾಗಿದೆ. ನಾಥದ್ವಾರ ಚಿತ್ರಕಲೆ ಇತರ ಪ್ರಕಾರಗಳಲ್ಲಿ, ಬಾಲಕೃಷ್ಣನಿಂದ ರಾಧಾಕೃಷ್ಣನವರೆಗೂ ಚಿತ್ರಿಸಲಾದ ಅಪರೂಪದ ಸೂಕ್ಷ್ಮ ಚಿತ್ರಕಲೆ, ಬಿಳಿಯ ಹಸು, ಗುಲಾಬಿ

